# 7

# ಯೇಸುವಿನಲ್ಲಿ ಅಡಗಿರುವ ಶಿಷ್ಯರ ಜೀವಿತ

## (ಯೋಹಾನ 15)

*"ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದ್ದಿರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ, ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ" (ವಚನಗಳು 1-6).*

ಯೇಸು, ತಾನು ಹೊರಟುಹೋಗುವ ವಿಚಾರವನ್ನು ಅಪೊಸ್ತಲರಿಗೆ ತಿಳಿಸಿ, ಮುಂದೆ ಆತನ ಅನುಪಸ್ಥಿತಿಯ ಸಮಯದಲ್ಲಿ ಅವರು ತಮ್ಮ ಆತ್ಮೀಕ ಜೀವನದಲ್ಲಿ ಹೇಗೆ ಸಾಗಬೇಕೆಂಬ ವಿಚಾರವನ್ನು ಅವರಿಗೆ ತಿಳಿಸಿದನು. ಆತನು ದ್ರಾಕ್ಷೇ ಬಳ್ಳಿ ಹಾಗೂ ಅದರ ಕೊಂಬೆಗಳ ನಿದರ್ಶನದಿಂದ ಈ ವಿಚಾರವನ್ನು ಸ್ಪಷ್ಟಪಡಿಸಿದನು. ಆತನ ತಂದೆಯು ತೋಟಗಾರನು, ತಾನು ದ್ರಾಕ್ಷೇ ಬಳ್ಳಿ, ಹಾಗೂ ಪ್ರತಿಯೊಬ್ಬ ಶಿಷ್ಯನು ಕೊಂಬೆಗಳು ಎಂದು ವಿವರಿಸದನು. ಈ ನಿದರ್ಶನದಲ್ಲಿರುವ ಸಂಬಂಧವು ಇತರೆ ಸಂಬಂಧಗಳಿಗಿಂತಲೂ ಮೇಲಾದವು ಎಂಬ ಮುಖ್ಯ ಅಂಶವನ್ನು ತಿಳಿಸಿರುವನು. ಇದರಲ್ಲಿ ತಂದೆ, ಮಗ ಹಾಗೂ ಶಿಷ್ಯ ಎಂಬ ತ್ರಯೋಕತ್ವವನ್ನು ತೋರಿಸಿರುವನು.

ಯೇಸುವಿನ ಈ ಮಾತುಗಳನ್ನು ನಾವುಗಳು ಅರ್ಥಮಾಡಿಕೊಳ್ಳಬೇಕು, ಯಾಕೆಂದರೆ ಅಪೊಸ್ತಲರು ಸಹ ಅದನ್ನು ತಿಳಿಯಬೇಕಿತ್ತು. ತಾನು ತಂದೆಯ ಬಲಪಾರ್ಶ್ವದಲ್ಲಿ ಸೇರಿಕೊಂಡ ನಂತರ, ಆತನ ಶಿಷ್ಯರು ಲೋಕದಲ್ಲಿ ಆತ್ಮೀಯ ಜೀವನವನ್ನು ಯಾವ ರೀತಿ ನಡೆಸಬೇಕಿತ್ತು ಎಂದು ವಿವರಿಸಿದನು. ಅಪೊಸ್ತಲರು ಯೇಸುವಿನ ದೈಹಿಕವಾದ ಸಾನಿಧ್ಯವನ್ನು ಕಳಕೊಂಡರೂ, ಅವರು ಜೀವವಿರುವ ಹಾಗೆ ಆತನೊಂದಿಗೆ ಸಂಬಂಧವನ್ನು ಹೊಂದಬೇಕಿತ್ತು. ಹಾಗೆಯೇ ಈ ಲೋಕದ ನಮ್ಮ ಜೀವಿತದಲ್ಲ ನಾವು ಕ್ರಿಸ್ತನಿಗೆ ಕೊಂಬೆಗಳಾಗಿ ಆತನಲ್ಲಿ ಜೀವಿಸಬೇಕು.

### ಅಗತ್ಯವಾದ ಒಂದು ಸಂಬಂಧ

*ಶಿಷ್ಯರು ಆತನೊಂದಿಗೆ ಅಗತ್ಯವಾದ ಒಂದು ಸಂಬಂದದಲ್ಲಿದ್ದರು.* ಯೇಸು ಕ್ರಿಸ್ತನು ತಾನೇ ದ್ರಾಕ್ಷೇ ಬಳ್ಳಿ ಮತ್ತು ಆತನಲ್ಲಿ ಇರದವರು ಯಾವುದೇ ವಿಧವಾದ ಆತ್ಮೀಕ ಜೀವನವನ್ನು ಪಡೆಯಲು ನಾವುಗಳು ಆತನಲ್ಲಿಯೇ ಇರಬೇಕು. ಆದ್ದರಿಂದ ಆತನು, "ನಾನೇ ನಿಜವಾದ

ದ್ರಾಕ್ಷೆ ಬಳ್ಳಿ, ನನ್ನ ತಂದೆ ತೋಟಗಾರನು" (15:1) ಎಂದು ಹೇಳಿದನು. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ, ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿ ಹೋಗುವನು, ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ (15:6).

ಒಬ್ಬನು ಆ ಬಳಿಗೆ ಸೇರುವದಾದರೆ, ಈ ತತ್ವದ ಆಧಾರದ ಮೇಲೆ ಕ್ರೈಸ್ತನಾಗಿ ಜೀವಿಸುವನು - ರಕ್ಷಣೆಗೆ ನಂಬಿಕೆ, ಮಾನಸಾಂತರ, ಅರಿಕೆ ಹಾಗೂ ದೀಕ್ಷಾಸ್ನಾನದ ಅಗತ್ಯವಿರುತ್ತದೆ. ಆಗ ಆತನ ಕೊಂಬೆಗಳು ನಾವಾಗುತ್ತೇವೆ. ಪೌಲನು, "ಇನ್ನೊಂದು ಚಿತ್ರಣವನ್ನು ತೋರಿ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:27). ದೀಕ್ಷಾಸ್ನಾನದಲ್ಲಿ, ನಾವು ಕ್ರಿಸ್ತನನ್ನು ಸೇರಿ, ಆತನಿಂದ ಅವರಿಸಲ್ಪಟ್ಟಿದ್ದೇವೆ. ಬಳಿಯಲ್ಲಿರುವ ಕೊಂಬೆಗಳಂತೆ, ನಾವು ಕ್ರಿಸ್ತನಲ್ಲಿ ಬೆಳೆಯುವ, ಹೂವು ಬಿಡುವ ಹಾಗೂ ಫಲ ನೀಡುವ ಕೊಂಬೆಗಳಾಗುತ್ತೇವೆ ಮತ್ತು ಆತನಿಂದಲೇ ಜೀವವನ್ನು ಪಡೆಯುತ್ತೇವೆ. ನಾವು ಆತನ ಅನ್ಯೋನ್ಯತೆಯಲ್ಲಿ ಮುಂದುವರೆಯುತ್ತೆವೆ. ಆ ಅನ್ಯೋನ್ಯತೆ ನಮ್ಮೊಂದಿಗಿರುವತ್ತದೆ. ಯಾವುದೇ ಕೊಂಬೆಯ ಬಳ್ಳಿಯಿಂದ ಪ್ರತ್ಯೇಕವಿರಲಾರದು, ಕ್ರಿಸ್ತನ ಹೊರತಾಗಿ ಯಾರೂ ಸಹ ಕ್ರೈಸ್ತ ಜೀವಿತವನ್ನು ಜೀವಿಸಲಾರರು.

## ಮುಂದುವರೆಯುವ ಸಂಬಂಧ

*ನಾವು ಕ್ರಿಸ್ತನಲ್ಲಿ ನಮ್ಮ ಅನ್ಯೋನ್ಯತೆಯನ್ನು ಮುಂದುವರೆಸುತ್ತೇವೆ.* "ನಾನೇ ದ್ರಾಕ್ಷೇ ಬಳ್ಳಿ ನೀವು ಕೊಂಬೆಗಳು ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ, ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ" (15:5). ಇಲ್ಲಿ "ನನ್ನಲ್ಲಿಯೂ" ಎಂದಿರುವ ಪದದಲ್ಲಿ ಮುಂದುವರಿಯುವ ಅಂಶವನ್ನು ಸೂಚನಲಾಗಿದೆ. ಆತನೊಂದಿಗಿರುವ ನಮ್ಮ ಅನ್ಯೋನ್ಯತೆಯು ನಿರಂತರವಾದ, ದಿನನಿತ್ಯದ ಹಾಗೂ ವೃದ್ಧಿಗೊಳ್ಳುವ ಅನ್ಯೋನ್ಯತೆಯಾಗಿದೆ.

ಒಬ್ಬನು ಊಟವನ್ನೇ ಮಾಡದಿದ್ದು, ಒಂದು ವೇಳೆ ವೈದ್ಯನು ಅವನಿಗೆ ಜೀವವನ್ನು ಕಾಪಾಡುವ ಔಷದಗಳನ್ನು ನೀಡದೆ ಹೋದರೆ ಅವನು ಸತ್ತು ಹೋಗುವನು. ಆಹಾರವಿಲ್ಲದಿದ್ದರೆ, ಯಾರೂ ಬದುಕಲಾರರು, ಕ್ರಿಸ್ತನ ದೈವೀಕ ಬಲವಿಲ್ಲದಿದ್ದರೆ ಕ್ರೈಸ್ತನು ಬದುಕಲಾರನು. ನಾವು ಆತನೊಂದಿಗೆ ನಡೆದು ಆತನಲ್ಲಿ ಪ್ರಾರ್ಥಿಸಿ, ಆತನಿಂದ ಆರೈಕೆಯನ್ನು ಪಡೆಯುವ ಮೂಲಕ ಆತನ ಹಾಗೆ ಬೆಳೆಯುವದರಿಂದ ನಮ್ಮ ಅನ್ಯೋನ್ಯತೆಯನ್ನು ಸುಭದ್ರಪಡಿಸಿಕೊಳ್ಳಬಹುದು.

## ಲಾಭದಾಯಕವಾದ ಒಂದು ಸಂಬಂಧ

*ಕ್ರಿಸ್ತನ ಜೀವವನ್ನು ನಮ್ಮಲ್ಲಿ ಹೊಂದಿರುವದು ಅಂದರೆ, ನಮ್ಮ ಅನ್ಯೋನ್ಯತೆಯು ಫಲದಾಯಕವಾಗಿರಬೇಕು.* ಯೇಸು ಹೇಳಿದ್ದೇನೆಂದರೆ, "ನೀವು ನನ್ನಲ್ಲಿ ನೆಲೆಗೊಂಡಿರ್ರಿ ನಾನು ನಮ್ಮಲ್ಲಿ ನೆಲೆಗೊಂಡಿರುವೆನು, ಕೊಂಬೆಯ ಬಳಿಯಲ್ಲಿ ನೆಲೆಗೊಂಡಿರದಿದ್ದರೆ ... ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ, ಫಲಕೊಡಲಾರಿರಿ" (15:4). ಈ ವಿಧವಾದ ದೈವೀಕ ಶಕ್ತಿಯು ನಮ್ಮಲ್ಲಿ ಹರಿಯುವಾಗ, ಅದರಿಂದ ನಾವು ಫಲತೋರಬೇಕು. ನಾವು ಅದಕ್ಕೆ ಪ್ರತಿಸ್ಪಂದಿಸಿ ಕ್ರಿಸ್ತನು ಬಯಸುವಂಥ - ಆತ್ಮೀಕ ಜೀವನವನ್ನು ಆತನ ಹಾಗೆ ವೃದ್ಧಿಯಾಗುವ, ಆತನ ಪ್ರೀತಿಯ, ಫಲವನ್ನು ತೋರಿ ಆತನ ಹಾಗೆ ಸೇವೆ ಮಾಡುವವರಾಗಿರಬೇಕು - ಅಥವಾ ಆತ್ಮೀಕ ಮರಣವನ್ನು ಹೊಂದಬೇಕು ಉದಾಹರಣೆ: ಗ್ರಹಾಮ್ ಸ್ಕ್ರೋಗಿಯವರು ಬರೆದಂತೆ,

> ಮೊದಲನೆಯದಾಗಿ, ಎರಡು ವಿಚಾರಗಳನ್ನು ಸ್ವಲ್ಪಪಡಿಸಿಕೊಳ್ಳಬೇಕು; ಜೀವ ಇಲ್ಲದಿರುವಲ್ಲಿ ಫಲವಿರುವದಿಲ್ಲ. ಎರಡನೆಯದಾಗಿ, ಜೀವವಿರುವಲ್ಲಿ ಫಲಗಳ ಅಳತೆಗಳ ಇರುತ್ತದೆ.[1]

ಯೇಸು ಹೇಳಿದ ಹಾಗೆ 15:2, "ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ" ನಾವು ಕೊಂಬೆಗಳಾಗಿದ್ದರೂ, ಆದರಿಂದ ದೊರಕುವ ದೈವೀಕ ಜೀವವನ್ನು ಸದ್ಭಳಿಕೆ ಮಾಡದಿದ್ದರೆ, ನಮ್ಮನ್ನು ಮುನ್ನಡೆಸುವ ಪವಿತ್ರಾತ್ಮನನ್ನು ನಂದಿಸುವವರಾಗಿದ್ದೇವೆ.

ಕ್ರಿಸ್ತನ ದೈವೀಕವಾದ ಶಕ್ತಿಯನ್ನು ಹೊಂದಿಕೊಂಡು, ಕೆಲಸ ನಿರ್ವಹಿಸುವಾಗ, ನಾವು ಆತನ ಹಾಗೆ ಮಾರ್ಪಡುವಾಗ, ನಾವು ತಂದೆಯಿಂದ ಉತ್ತೇಜನವನ್ನು ಹೊಂದಿ ಬೇಗನೆ ವೃದ್ಧಿಗೊಳ್ಳುತ್ತೇವೆ. ಆತನು ಕೆಲವು ಸಾರಿ ನಮ್ಮನ್ನು ಶಿಕ್ಷಿಸಿ, ಮಗನ ಜೀವವು ನಮ್ಮಲ್ಲಿ ಅಭಿವೃದ್ಧಿಯಾಗುವಂತೆ ಮಾಡುತ್ತಾನೆ. ಅಪೊಸ್ತಲರು ಪ್ರಚಲಿತವಾಗಿ ಯೇಸುವಿನ ಮಾತುಗಳಿಂದ ಶಿಕ್ಷಿತರಾಗಿದ್ದರು. ಆದ್ದರಿಂದ ಆತನು ಅವರಿಗೆ, "ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗು ಶುದ್ಧರಾಗಿದ್ದೀರಿ" (15:3) ಅಂದನು. ಅದೇ ರೀತಿಯಲ್ಲಿ ತಂದೆಯ ಮಾತುಗಳು ನಮ್ಮ ಹೃದಯಗಳನ್ನು ಹಾದು ನಮ್ಮಲ್ಲಿ ಹೊಸ ಶಕ್ತಿಯನ್ನು ನೀಡಿ, ಪರಿಣಾಮಕಾರಿಯಾದ ಜೀವಿತವನ್ನು ಜೀವಿಸಲು ಸಹಾಯಿಸುತ್ತದೆ.

## ಮುಕ್ತಾಯ

ಯೇಸು ನಮಗೆ ಕೇವಲ ಭರವಸೆ, ಹಾಗೂ ನಿದರ್ಶನ ನಾಯಕ, ರಕ್ಷಕ ಹಾಗೂ ನಮ್ಮ ಕರ್ತನು ಮಾತ್ರವಾಗಿರದೆ, ಆತನು ನಮ್ಮ ಜೀವವೇಆಗಿರುವನು. ಆತನಿಲ್ಲದೆ ನಾವುಗಳು ಏನು ಅಲ್ಲದವರಾಗಿದ್ದೇವೆ. ಆತನಿಲ್ಲದೆ ಏನೂ ಮಾಡಲಾರೆವು, ಆತನಿಲ್ಲದೆ ಏನನ್ನೂ ಹೊಂದುವದಿಲ್ಲ. ನಮ್ಮ ಜೀವವು ಆತನಲ್ಲಿ ಉದುಗಿರುವದರಿಂದ, ವಿಶೇಷ ವಾದ ಅನ್ಯೋನ್ಯತೆಯನ್ನು ಆತನ ಸಂಗಡ ಹೊಂದಿದ್ದೇವೆ - ಅಗತ್ಯವಾದ ಹಾಗೂ ಮುಂದುವರೆದ ಈ ಅನ್ಯೋನ್ಯತೆಯ ನಿಮಿತ್ತ ನಾವು ವೃದ್ಧಿಯಾಗಿ ಆತನಿಗೆ ಮಹಿಮೆ ತರುತ್ತೇವೆ.

---

*"ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿರದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22, 23).*

*"ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ, ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ" (ಕೊಲೊಸ್ಸೆ 2:9, 10).*

---

ಟಿಪ್ಪಣಿ

[1]W. Graham Scroggie, *The Gospel of John,* Study Hour Commentaries (Grand Rapids, Mich.: Zondervan Publishing House, 1976), 101.